ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಕೋರ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 01.10.15

ಈ ವಾರದ ಮುನ್ಸೂಚನೆ (02-10-15 to 06.10.15 ವರೆಗೆ)

ನಿಯತಾಂಕಗಳು	02/10/15	03/10/15	04/10/15	05/10/15	06/10/15
ಮಳೆ (ಮಿ ಮಿ)	21	17	2	15	21
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	29	29	28
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	19	19	20
ಮೋಡ (ಪ್ರಮಾಣ)	6	7	7	5	6
ಅರ್ದ್ರತೆ ೭.೨೦ ಬೆ (ಶೇ)	100	99	97	97	96
ಅರ್ದ್ರತೆ ೨.೨೦ ಮ (ಶೇ)	63	66	54	60	63
ಗಾಳಿಯ ವೇಗ (ಕಿ.ಮಿ/ಗಂಟೆಗೆ)	10	13	11	10	6
ಗಾಳಿಯ ದಿಕ್ಕು (ಡಿಗ್ರಿ)	213	246	270	296	297

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಕೋರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಹಗುರದಿಂದ ಸಾಧಾರಣ ಮಳೆಯ ನಿರೀಕ್ಷೆಯಿದೆ. ದಿನದ ಗರಿಷ್ಠ ಉಷ್ಣಾಂಶವು 28-29°C ಮತ್ತು ಕನಿಷ್ಠ 19-20°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 96-100% ಇದ್ದು, ಮಧ್ಯಾಹ್ನ 54-66% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 6-13 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಕಳೆ ನಿರ್ವಹಣೆ ಕೈಗೊಳ್ಳಬೇಕು
- ಎರಡು ದಿನಗಳ ನಂತರ ಮಳೆಯ ನಿರೀಕ್ಷೆ ಇರುವುದರಿಂದ ಔಷಧಿ ಸಿಂಪಡಣೆಯನ್ನು ಮುಂದೂಡಬೇಕು.

ಬೆಳೆ ಹಾಗೂ ತಳಿಗಳು:

ಅಕ್ಟೋಬರ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು:

ಹುರುಳಿ– ಕೆ.ಬಿ.ಹೆಚ್–೧, ಫ್.ಹೆಚ್.ಜಿ.–೯, **ಅವರೆ**–ಹೆಚ್.ಎ–೧, ೩, ೪, **ಪಾಪ್‌ಕಾರ್ನ್**: ಅಂಬರ್. **ಅಲಸಂದೆ**: ಟಿ.ವಿ.ಎಕ್ಸ್–೯೪೪, ಕೆ.ಬಿ.ಸಿ.–೧, ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. 4ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (1ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.
- ✓ **ಗೂಡು ಮಾಡುವ ಹುಳು** ಕಂಡುಬಂದರೆ ಕ್ವಿನಾಲ್ಫಾಸ್ (2 ಮಿ.ಲೀ/ಲೀ) ಸಿಂಪಡಿಸಿ.
- ✓ **ದಾಳಿಂಬೆ: ಅಂಗಮಾರಿ ರೋಗಕ್ಕೆ ಸ್ಟ್ರೆಪ್ಟೋಸೈಕ್ಲಿನ್ (೦.೫ಗ್ರಾಂ) + ಕಾಪರ್ ಆಕ್ಸಿ ಕ್ಲೋರೈಡ್ (೨.೫ ಗ್ರಾಂ) ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಬೆಳ್ಳುಳ್ಳಿ ಕಷಾಯ ಕೂಡ ಬ್ಯಾಕ್ಟೀರಿಯನಾಶಕ ಗುಣವನ್ನು ಹೊಂದಿದೆ.**
- ✓ **ಕಾಯಿ ಕೊಳೆ ರೋಗಕ್ಕೆ ಕ್ಯಾಪ್ಟಾನ್ ಸಿಂಪಡಿಸಬಹುದುನ್ ಅಥವಾ ಕಸ್ಟೋಡಿಯಾ ಶಿಲೀಚಿಧ್ರನಾಶಕವನ್ನು ಸಿಂಪಡಿಸಬಹುದು.**

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು